ಚಾಮುಂಡೇಶ್ವರಿ ವಿದ್ಯುತ್ ಸರಬರಾಜು
ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ,
ಚಾವಿಸನಿನಿ, ಮೈಸೂರು-570017
Telephone No: 0821-234338

CHAMUNDESHWARI ELECTRICITY
SUPPLY CORPORATION LIMITED
*(A Government of Karnataka Undertaking)*
Corporate Office,
CESC, Mysuru-570017
**Web Site: www.cescmysore.org.**
E-mail ID:gmhrd@cescmysore.org

Company Identity Number[CIN]:- **U40109KA2004SGC035177**

---

**ವಿಷಯ:** ಸಹಾಯಕ ಲೆಕ್ಕಾಧಿಕಾರಿ ಹುದ್ದೆಯನ್ನು ಸ್ಥಳಾಂತರಿಸುವ ಬಗ್ಗೆ.

******

**ಪೀಠಿಕೆ**

ಕಂಪನಿ ಕಾರ್ಯದರ್ಶಿ ಶಾಖೆಯಲ್ಲಿ ಚಾವಿಸನಿನಿ ನಿರ್ದೇಶಕ ಮಂಡಳಿಯ ವಾರ್ಷಿಕ ಸಾಮಾನ್ಯ ಸಭೆ, ಮಂಡಳಿ ಸಭೆ, ಖರೀದಿ ಸಮಿತಿ ಸಭೆ ನಾಮನಿರ್ದೇಶನ ಮತ್ತು ಸಂಭಾವನೆ ಸಮಿತಿ ಸಭೆ ಹಾಗೂ ಕಾರ್ಪೋರೇಟ್ ಜವಾಬ್ದಾರಿ ಸಮಿತಿ ಸಭೆಗಳನ್ನು ಏರ್ಪಡಿಸುವುದು, ನಿರ್ದೇಶಕರ ನೇಮಕಾತಿ ಮತ್ತು ಸಮಪ್ತಿಗಳನ್ನು ಅನುಸರಿಸಿ ಕಾರ್ಪೋರೇಟ್ ಸಚಿವಾಲಯದ ವೆಬ್‌ಸೈಟ್‌ನಲ್ಲಿ ನೊಂದಾಯಿಸುವುದು. DIN, DSC, KYC ಗಳನ್ನು ನಿರ್ದೇಶಕರ ಪರವಾಗಿ ನೊಂದಾಯಿಸುವುದು, ಈಕ್ವಿಟಿ ಹಂಚಿಕೆಗಳಿಗೆ Share Certificate ವಿತರಿಸುವುದು Statutory Register Directors Register ಇತ್ಯಾದಿಗಳನ್ನು ನಿರ್ವಹಿಸಬೇಕಾಗಿದ್ದು, ಈ ಎಲ್ಲಾ ಕಾರ್ಯಗಳನ್ನು ನಿರ್ವಹಿಸಲು ಕಂಪನಿ ಕಾರ್ಯದರ್ಶಿಯವರಿಗೆ ನೆರವಾಗಲು ಒಂದು ಸಹಾಯಕ ಹುದ್ದೆಯನ್ನು ಮಾತ್ರ ಮಂಜೂರು ಮಾಡಲಾಗಿರುತ್ತದೆ. ಅಧಿಕಾರಿ ಹಂತದ ಹುದ್ದೆಯು ಇಲ್ಲದ ಕಾರಣ ಸದರಿ ಕಾರ್ಯಗಳನ್ನು ಸರಿಯಾದ ಸಮಯಕ್ಕೆ ನಿರ್ವಹಿಸಲು ಸಾಧ್ಯವಾಗುತ್ತಿಲ್ಲವಾದುದರಿಂದ ಒಂದು ಸಹಾಯಕ ಲೆಕ್ಕಾಧಿಕಾರಿ ಹುದ್ದೆಯನ್ನು ಮುಖ್ಯ ಆರ್ಥಿಕ ಅಧಿಕಾರಿ ಶಾಖೆಯಲ್ಲಿ ಮಂಜೂರಾಗಿ ಖಾಲಿಯಿರುವ ವಿಶೇಷಾಧಿಕಾರಿ (ಸಹಾಯಕ ಲೆಕ್ಕಾಧಿಕಾರಿ) ಹುದ್ದೆಯನ್ನು ಕಂಪನಿ ಕಾರ್ಯದರ್ಶಿ ಶಾಖೆಗೆ ಸ್ಥಳಾಂತರಿಸುವಂತೆ ಕೋರಿ ಸಲ್ಲಿಸಿರುವ ಪ್ರಸ್ತಾವನೆಗೆ, ಮಾನ್ಯ ವ್ಯವಸ್ಥಾಪಕ ನಿರ್ದೇಶಕರವರಿಂದ ಅನುಮೋದನೆ ದೊರಕಿರುವ ಹಿನ್ನಲೆಯಲ್ಲಿ ಈ ಕೆಳಕಂಡಂತೆ ಆದೇಶಿಸಿದೆ.

ಕಂಪನಿ ಕಾರ್ಯದರ್ಶಿ ಶಾಖೆಯಲ್ಲಿನ ಸಹಾಯಕ ಲೆಕ್ಕಾಧಿಕಾರಿಯು ಈ ಕೆಳಕಂಡ ಕಾರ್ಯಗಳನ್ನು ನಿರ್ವಹಿಸಬೇಕಾಗಿರುತ್ತದೆ.

1. ವಾರ್ಷಿಕ ಸಾಮಾನ್ಯ ಸಭೆ / ವಿಶೇಷ ಸಾಮಾನ್ಯ ಸಭೆಗಳು , ಮಂಡಳಿ ಸಭೆಗಳು, ಖರೀದಿ ಸಮಿತಿ ಸಭೆಗಳು, ನಾಮನಿರ್ದೇಶನ ಮತ್ತು ಸಂಭಾವನೆ ಸಮಿತಿ ಸಭೆಗಳು, ಆಡಿಟ್ ಸಮಿತಿ ಸಭೆಗಳು ಮತ್ತು ಕಾರ್ಪೋರೇಟ್ ಸಾಮಾಜಿಕ ಜವಾಬ್ದಾರಿ ಸಮಿತಿ ಸಭೆಗಳು ಇತ್ಯಾದಿ ಸಭೆಗಳನ್ನು ಜರುಗಿಸಲು ವ್ಯವಸ್ಥೆ ಮಾಡುವುದು ಮತ್ತು ಸಭಾ ಸೂಚನಾ ಪತ್ರಗಳನ್ನು ವಿತರಿಸುವುದು, ಕಾರ್ಯಸೂಚಿ ಟಿಪ್ಪಣಿಗಳನ್ನು ವಿತರಿಸಲು ವ್ಯವಸ್ಥೆ ಮಾಡುವುದು, ಕರಡು ನಡಾವಳಿಗಳನ್ನು ತಯಾರಿಸುವುದು, ನಡಾವಳಿಗಳನ್ನು ವಿತರಿಸುವುದು ಮತ್ತು ಸಭೆಗಳಲ್ಲಿ ಕೈಗೊಂಡ ನಿರ್ಣಯಗಳಿಗೆ ತೆಗೆದುಕೊಂಡ ಕ್ರಮಗಳ ಅನುಸರಣೆ ಮಾಡುವುದು.
2. ಕಂಪನಿಯ ಶಾಸನಬದ್ಧ ರಿಜಿಸ್ಟರ್‌ಗಳಾದ ನಿರ್ದೇಶಕರುಗಳ ಮತ್ತು ಕೆಎಂಪಿಗಳ ರಿಜಿಸ್ಟರ್, ಷೇರುದಾರರ ರಿಜಿಸ್ಟರ್, ಚಾರ್ಜ್‌ಗಳ ರಿಜಿಸ್ಟರ್, Common Seal ರಿಜಿಸ್ಟರ್, ಷೇರು ಹಂಚಿಕೆ ಮತ್ತು ವರ್ಗಾವಣೆಗಳ ರಿಜಿಸ್ಟರ್ ಇತ್ಯಾದಿ ಶಾಸನಬದ್ಧ ರಿಜಿಸ್ಟರ್‌ಗಳ ನಿರ್ವಹಣೆ.
3. ಕಾಲಕಾಲಕ್ಕೆ ಸರ್ಕಾರದ ಮಟ್ಟದಲ್ಲಿ ನಿರ್ದೇಶಕರ ನೇಮಕಾತಿ ಮತ್ತು ಹಿಂಪಡೆಯುವಿಕೆಗೆ ಸಂಬಂಧಿಸಿದಂತೆ ಅನುಸರಣೆ.
4. ಈಕ್ವಿಟಿ ಹಂಚಿಕೆಗಾಗಿ ಷೇರು ಪ್ರಮಾಣಪತ್ರಗಳ ವಿತರಣೆ ಮತ್ತು ಷೇರು ಹಂಚಿಕೆಗಾಗಿ ಸ್ಟ್ಯಾಂಪ್ ಡ್ಯೂಟಿ ಪಾವತಿ ಮತ್ತು ಕಂಪನಿಗಳ ರಿಜಿಸ್ಟ್ರಾರ್‌ಗೆ ಅಗತ್ಯ ನಮೂನೆಗಳನ್ನು ಸಲ್ಲಿಸುವುದು.
5. ನಿರ್ದೇಶಕರುಗಳಿಗೆ ಸಂಬಂಧಿಸಿದಂತೆ ಡಿನ್, ಡಿಎಸ್‌ಸಿ, ವಾರ್ಷಿಕ ಡಿನ್-ಕೆವೈಸಿ ಗಳ ಅನುಸರಣೆಗಳು, ಐಐಸಿಎ ಪೋರ್ಟಲ್‌ನಲ್ಲಿ ಸ್ವತಂತ್ರ ನಿರ್ದೇಶಕರ ನೋಂದಣಿ ಆಸಕ್ತಿಯ ವಾರ್ಷಿಕ ಬಹಿರಂಗ ಪಡಿಸುವಿಕೆ ಮತ್ತು ಇತರೆ ಅನುಸರಣೆಗಳು ಇತ್ಯಾದಿ.
6. ಭಾರತ ಸರ್ಕಾರದ ಕಾರ್ಪೋರೇಟ್ ವ್ಯವಹಾರಗಳ ಸಚಿವಾಲಯಕ್ಕೆ ಸಲ್ಲಿಸಬೇಕಾದ ಅಗತ್ಯ ಇ- ನಮೂನೆಗಳು ಅಂದರೆ ವಾರ್ಷಿಕ ಲೆಕ್ಕಪತ್ರಗಳು, ವಾರ್ಷಿಕ ಆದಾಯಗಳು, ನಿರ್ಣಯಗಳು, ಶಾಸನಬದ್ಧ /ವೆಚ್ಚ / ಸೆಕ್ರೇಟೇರಿಯಲ್ ಲೆಕ್ಕ ಪರಿಶೋಧಕರ ನೇಮಕಾತಿ, ಆಡಿಟ್ ವರದಿಗಳನ್ನು, ನಿರ್ದೇಶಕರ ನೇಮಕಾತಿ / ಹಿಂಪಡೆಯುವಿಕೆ, ಚಾರ್ಜ್‌ಗಳ ಸೃಷ್ಟಿ ಮತ್ತು ಮಾರ್ಪಾಡು, ಎಂಎಸ್‌ಎಂಇ ವಿವರಗಳು, ಡಿಐಆರ್-3 ಕೆವೈಸಿ ಇತ್ಯಾದಿಗಳನ್ನು ಎಂಸಿಎ ಪೋರ್ಟಲ್‌ನಲ್ಲಿ ಸಲ್ಲಿಸುವುದು.
7. ಕಾರ್ಪೋರೇಟ್ ಆಡಳಿತದ ಚೌಕಟ್ಟಿಗೆ ಸಂಬಂಧಿಸಿದ ಲೆಕ್ಕಪರಿಶೋಧನೆ / ವಿಷಯಗಳಿಗೆ ಸಂಬಂಧಿಸಿದಂತೆ ಸಿ&ಎಜಿ ಮತ್ತು ಇಂಧನ ಸಚಿವಾಲಯ, ಭಾರತ ಸರ್ಕಾರದೊಂದಿಗೆ ಸಂಪರ್ಕ ಸಾಧಿಸುವುದು.
8. ಕಂಪನಿಯ ನಿರ್ದೇಶಕರ ವರದಿಯನ್ನು ಸಿದ್ಧಪಡಿಸುವುದು.

9. ಕೆಇಆರ್‌ಸಿ ನಿಯಮಾವಳಿಗಳ ಪ್ರಕಾರ ಕಂಪನಿಯ ಗ್ರಾಹಕರ ಕುಂದುಕೊರತೆ ನಿವಾರಣಾ ವೇದಿಕೆಯನ್ನು ನಿರ್ವಹಿಸುವುದು, ಪ್ರತಿ ಜಿಲ್ಲಾ ಮಟ್ಟದ ಸಮಿತಿಗಳಿಗೆ ನಾಮನಿರ್ದೇಶಿತ ಸದಸ್ಯರ ನೇಮಕಕ್ಕಾಗಿ ಗೌರವಾನ್ವಿತ ಕೆಇಆರ್‌ಸಿಯ ಕ್ರಮಗಳನ್ನು ಅನುಸರಣೆ ಮಾಡುವುದು. ಸಮಿತಿ ಸದಸ್ಯರ ಕಾರ್ಯವಿಧಾನಗಳು ಮತ್ತು ವಿವರಗಳನ್ನು ನಿಯತಕಾಲಿಕವಾಗಿ ಪ್ರಮುಖ ಪತ್ರಿಕೆಗಳಲ್ಲಿ ಜಾಹೀರಾತು ನೀಡುವುದು.

10. ಕಾಲಕಾಲಕ್ಕೆ ಕಂಪನಿ ಕಾರ್ಯದರ್ಶಿಯವರು ನಿರ್ದೇಶಿಸುವ ಇತರ ಕಾರ್ಯಗಳನ್ನು ನಿರ್ವಹಿಸುವುದು.

## ಆದೇಶ

ಕ್ರಮಾಂಕ : ಪ್ರವ್ಯ(ಆ ಮತ್ತು ಮಾ.ಸಂ)/ಉಪ್ರವ್ಯ/ಸಪ್ರವ್ಯ/ವ್ಯ/2020-21/ CYS-114 ದಿನಾಂಕ: 25 APR 2022

ಮುಖ್ಯ ಆರ್ಥಿಕ ಅಧಿಕಾರಿ ಶಾಖೆಯಲ್ಲಿ ಹಾಲಿ ಮಂಜೂರಾಗಿ ಖಾಲಿಯಿರುವ ಒಂದು ಸಂಖ್ಯೆಯ ಸಹಾಯಕ ಲೆಕ್ಕಾಧಿಕಾರಿ(ವಿಶೇಷಾಧಿಕಾರಿ) ಹುದ್ದೆಯನ್ನು ಕಂಪನಿ ಕಾರ್ಯದರ್ಶಿ ಶಾಖೆ, ನಿಗಮ ಕಛೇರಿ, ಮೈಸೂರು ಇಲ್ಲಿಗೆ ಸ್ಥಳಾಂತರಿಸಿ ಆದೇಶಿಸಲಾಗಿದೆ.

ಮಾನ್ಯ ವ್ಯವಸ್ಥಾಪಕ ನಿರ್ದೇಶಕರವರಿಂದ
ಅನುಮೋದಿಸಲ್ಪಟ್ಟಿದೆ.

ಆದೇಶದ ಮೇರೆಗೆ

ಪ್ರಧಾನ ವ್ಯವಸ್ಥಾಪಕರು(ಆ ಮತ್ತು ಮಾಸಂ)
ಚಾವಿಸನಿನಿ., ಮೈಸೂರು.

**ಪ್ರತಿಗಳು:**

- ಮುಖ್ಯ ಇಂಜಿನಿಯರ್(ವಿ), ಮೈಸೂರು ವಲಯ, ಚಾವಿಸನಿನಿ, ಮೈಸೂರು/ ಹಾಸನ ರವರ ಮಾಹಿತಿಗಾಗಿ
- ಮುಖ್ಯ ಪ್ರಧಾನ ವ್ಯವಸ್ಥಾಪಕರು(ಆಂ.ಪ), ನಿಗಮ ಕಛೇರಿ, ಚಾವಿಸನಿನಿ, ಮೈಸೂರು ರವರ ಮಾಹಿತಿಗಾಗಿ
- ಪ್ರಧಾನ ವ್ಯವಸ್ಥಾಪಕರು, ತಾಂತ್ರಿಕ/ವಾಣಿಜ್ಯ/ಖರೀದಿ/ಯೋಜನೆಗಳು/ಲೆ&ಕಂ/ಐ&ಆರ್, ನಿಗಮ ಕಛೇರಿ, ಚಾವಿಸನಿನಿ, ಮೈಸೂರು ರವರ ಮಾಹಿತಿಗಾಗಿ
- ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವೃತ್ತಗಳು, ಚಾವಿಸನಿನಿ ರವರ ಮಾಹಿತಿಗಾಗಿ.
- ಕಂಪನಿ ಕಾರ್ಯದರ್ಶಿ, ನಿಗಮ ಕಛೇರಿ, ಚಾವಿಸನಿನಿ, ಮೈಸೂರು ಇವರ ಮಾಹಿತಿಗಾಗಿ
- ಉಪ ಪ್ರಧಾನ ವ್ಯವಸ್ಥಾಪಕರು(ಎಂ.ಐ.ಎಸ್. ಶಾಖೆ,) ನಿಗಮ ಕಛೇರಿ, ನಿಗಮದ ವೆಬ್‌ಸೆಟ್ ನಲ್ಲಿ ಪ್ರಕಟಿಸಲು.
- ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನ ವಿಭಾಗ, ಚಾವಿಸನಿನಿ ರವರುಗಳ ಮಾಹಿತಿಗಾಗಿ.
- ಮಾನ್ಯ ವ್ಯವಸ್ಥಾಪಕ ನಿರ್ದೇಶಕರು/ಮುಖ್ಯ ಆರ್ಥಿಕ ಅಧಿಕಾರಿರವರುಗಳ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ಮಾಹಿತಿಯನ್ನು ಮಾನ್ಯ ವ್ಯವಸ್ಥಾಪಕ ನಿರ್ದೇಶಕರು/ಮುಖ್ಯ ಆರ್ಥಿಕ ಅಧಿಕಾರಿಯವರ ಗಮನಕ್ಕೆ ತರುವಂತೆ ಕೋರಿದೆ.
- ಉಪಾಧ್ಯಕ್ಷರು, ಚಾವಿಸನಿನಿ, ನೌಕರರ ಸಂಘ, ರಿ(659), ಎಂ.ಪಿ ಅಂಡ್ ಎಲ್ ಕಾಂಪೌಂಡ್, ಶ್ರೀ ಹರ್ಷ ರಸ್ತೆ, ಮೈಸೂರು.
- ಉಪಾಧ್ಯಕ್ಷರು, ಪರಿಶಿಷ್ಠ ಜಾತಿ/ಪರಿಶಿಷ್ಠ ವರ್ಗಗಳ ಕಲ್ಯಾಣ ಸಂಸ್ಥೆ, (ರಿ.), ಎಂ.ಪಿ ಅಂಡ್ ಎಲ್ ಕಾಂಪೌಂಡ್, ಶ್ರೀ ಹರ್ಷ ರಸ್ತೆ, ಮೈಸೂರು.
- ಉಪಾಧ್ಯಕ್ಷರು, ಡಿಪ್ಲೋಮ, ಇಂಜಿನಿಯರ್‌ಗಳ ಸಂಘ, ಎಂ.ಪಿ ಅಂಡ್ ಎಲ್ ಕಾಂಪೌಂಡ್, ಶ್ರೀ ಹರ್ಷ ರಸ್ತೆ, ಮೈಸೂರು.
- ಉಪಾಧ್ಯಕ್ಷರು, ಕವಿಮಂ ಇಂಜಿನಿಯರ್‌ಗಳ ಸಂಘ, ಕಡಕೊಳ, ಮೈಸೂರು.
- ಕಾರ್ಯದರ್ಶಿ, ಚಾವಿಸನಿನಿ, ಲೆಕ್ಕಾಧಿಕಾರಿಗಳ ಸಂಘ, ಎಂ.ಪಿ ಅಂಡ್ ಎಲ್ ಕಾಂಪೌಂಡ್, ಶ್ರೀ ಹರ್ಷ ರಸ್ತೆ, ಮೈಸೂರು.
- ವ್ಯ-1/ಪ್ರ.ಕ.